


ಕನ್ನಡದಲ್ಲಿ ಇಬ್ಬರು ಮಹಾಕವಿಗಳಿದ್ದಾರೆಂದು ಹೆಮ್ಮೆಪಡುವ ಹೃದಯವಂತಿಕೆ ಬೇಡವೆ? ಇಂಥ ಪ್ರವೃತ್ತಿಗೆ ಉತ್ತರವಾಗಿಯೊ ಏನೋ ಕುವೆಂಪು ಅವರು 'ನಾನೇರುವೆತ್ತರಕೆ ನೀನೇರಬಲ್ಲೆಯ!' ಎಂದು ಕವನದ ಮೂಲಕ ವಿಮರ್ಶಕರಿಗೆ ಸವಾಲು ಹಾಕಿದಂತೆ ತೋರುತ್ತದೆ. ಈ ಕವನದ ಸವಾಲಿಗಿಂತ ಕುವೆಂಪು ಅವರ 'ಪಕ್ಷಿಕಾಶಿ' ಕವಿತೆಯು ಪೂರ್ವಗ್ರಹದ ವಿಮರ್ಶಕರಿಗೊಂದು ಸಮರ್ಥ ರೂಪಕಾತ್ಮಕ ಉತ್ತರವಾಗಿದೆ. ಉತ್ತಮ ಕವಿತೆಯೂ ಆಗಿದೆ. ಅದೇನೇ ಇರಲಿ ಕುವೆಂಪು ಮತ್ತು ಬೇಂದ್ರೆಯವರನ್ನು ಸಮಾನವಾಗಿ ಗೌರವಿಸುವ ಕನ್ನಡತನ ನಮ್ಮದಾಗಬೇಕು. ಈ ಮಧ್ಯೆ ಇನ್ನೊಂದು ಪ್ರಯತ್ನವೂ ನಡೆಯಿತು. ಕುವೆಂಪು ಅವರನ್ನು ಮಹಾಕವಿಯೆನ್ನುವ ಬದಲು ಮಹಾಕಾದಂಬರಿಕಾರರೆಂದು ಕರೆಯಲಾಯಿತು. (ಎಂ.ಜಿ. ಕೃಷ್ಣಮೂರ್ತಿಯವರು ಕುವೆಂಪು ಕಾದಂಬರಿಗಳ ಬಗ್ಗೆ ಬರೆದ ಲೇಖನವನ್ನು ಗಮನಿಸಬಹುದು.)

'ಶ್ರೇಷ್ಠತೆ'ಯೆಂಬುದನ್ನು ಸ್ಥಾನಮಾನವೆಂದು ಭಾವಿಸಿ, ನಡೆಸಿದ ಇಂಥ ಪ್ರಯತ್ನಗಳು ಸಾಹಿತ್ಯಾಸಕ್ತರಲ್ಲಿ ಚರ್ಚೆಗೆ ಕಾರಣವಾದವು. ಪೂರ್ವಗ್ರಹದ ಪ್ರಶ್ನೆಗಳೂ ಬೆಳೆದವು. ನಾನು ಒಂದು ಸಾಹಿತ್ಯ ಸಮಾವೇಶದ ಮುಖ್ಯ ಅತಿಥಿಯಾಗಿ ಅಮೆರಿಕಕ್ಕೆ ಹೋದಾಗ ನಡೆದ ಸಂವಾದದಲ್ಲಿ ಕೆಲವು ಕನ್ನಡಿಗರು, 'ಕುವೆಂಪು ಮಾತ್ರ ಮಹಾಕವಿಯೆ? ಬೇಂದ್ರೆಯವರು ಮಹಾಕವಿಯಲ್ಲವೆ? ಅವರದು ಶ್ರೇಷ್ಠಕಾವ್ಯ ಅಲ್ಲವೆ?' ಎಂದು ನನ್ನನ್ನು ಪ್ರಶ್ನಿಸಿದರು. ನಾನು ಕುವೆಂಪು ಮತ್ತು ಬೇಂದ್ರೆಯವರಿಬ್ಬರ ಕೊಡುಗೆಗಳನ್ನೂ ವಿವರಿಸಿ 'ನೋಡಿ, ನನ್ನನ್ನು ಕೇಳಿದರೆ ಎರಡು ಕುರ್ಚಿಗಳಿಗೆ ಮಹಾಕವಿ ಅಂತ ಎರಡು ಚೀಟಿ ಅಂಟಿಸಿ ಒಂದರಲ್ಲಿ ಕುವೆಂಪು, ಇನ್ನೊಂದರಲ್ಲಿ ಬೇಂದ್ರೆ ಅವರನ್ನು ಕೂಡಿಸ್ತೇನೆ. ಆದರೆ, ಒಂದು ವಿಷಯ ಅರ್ಥ ಮಾಡಿಕೊಳ್ಳಿ, ಶ್ರೇಷ್ಠತೆ ಅನ್ನೋದು ಕುರ್ಚಿಯ ಸ್ಥಾನಮಾನ ಅಲ್ಲ. ಮಹಾಕವಿ ಅನ್ನೋಕೆ ಈ ಕುರ್ಚಿಗಳ ಅಗತ್ಯ ಇಲ್ಲ. ಅವರು ಕುರ್ಚಿಗಳನ್ನು ಮೀರಿದ ಮಹಾಕವಿಗಳು' ಎಂದೆ. ಸಭೆಯಲ್ಲಿ ಚಪ್ಪಾಳೆಗಳ ಮೂಲಕ ಮೆಚ್ಚುಗೆ ವ್ಯಕ್ತವಾಯಿತು. ಮುಖ್ಯ ಪ್ರಶ್ನೆಯೆಂದರೆ, 'ಮಹಾಕವಿ' ಹೌದು ಅಥವಾ ಅಲ್ಲ ಎನ್ನುವುದು ಒಂದು ಪ್ರಜ್ಞಾಪೂರ್ವಕ ರಾಜಕೀಯವಾಗಬೇಕೆ? ಖಂಡಿತ ಆಗಬಾರದು.

ಆದರೆ, ವಿವಿಧ ನೆಲೆಗಳಲ್ಲಿ ಇಂಥದೊಂದು ಸಾಂಸ್ಕೃತಿಕ ರಾಜಕೀಯ ನಡೆಯುತ್ತ ಬಂದಿದೆ. ನಾನು ಇಲ್ಲೀವರೆಗೆ ನಿರೂಪಿಸಿದ ನಿದರ್ಶನಗಳಲ್ಲಿ ಇದನ್ನು ಕಾಣಬಹುದು. ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಸ್ಥಾಪಿಸುವ ವಿಚಾರಧಾರೆ ಮತ್ತು ಪ್ರವೃತ್ತಿಯು ಪ್ರಮುಖವಾಗಿ ನವ್ಯಸಾಹಿತ್ಯ ಕಾಲದ ಕೊಡುಗೆ. ಯಾವುದು ಅತ್ಯುತ್ತಮ ಅಥವಾ ಶ್ರೇಷ್ಠ ಕೃತಿಯೆಂಬುದಕ್ಕೆ ನವ್ಯಸಾಹಿತಿ–ವಿಮರ್ಶಕರು ತಮ್ಮದೇ ತಾತ್ವಿಕ ದೃಷ್ಟಿಯನ್ನು ಪ್ರಾಮಾಣಿಕವಾಗಿಯೂ ರೂಪಿಸಿಕೊಂಡಿರಬಹುದು. ಕೆಲವೊಮ್ಮೆ ಪೂರ್ವಗ್ರಹಗಳೂ ಕೆಲಸ ಮಾಡಿರಬಹುದು. ಕಾವ್ಯದ ಅತ್ಯುತ್ತಮಿಕೆಯ ಅಂತಿಮ